(ಇ) ಮೇಲ್ಕಂಡ ಕಾಲೇಜುಗಳಲ್ಲಿ (ಳ ಜಿಲ್ಲೆ) ಸರಕಾರಿ ನಿಯಮಾವಳಿಯಂತೆ ಇರಬೆ ಕಾದ ಹರಿಜನ ಗಿರಿಜನ ಶಿಕ್ಷಕರ ಸಂಖ್ಯೆ ಎಷ್ಟು ಹಾಗೂ ಹಾಲಿ ಕಾಲೇಜುಗಳಲ್ಲಿ ರಿಜನ, ಗಿರಿಜನ ಶಿಕ್ಷಕರ ಸಂಖ್ಯೆ ಎಷ್ಟು ?

(ಈ) ಕೊರತೆ ಇದ್ದರೆ ಕಾರಣಗಳೇನು?

ಬಾಗಲಕೋಟೆ ತಾಲ್ಲೂಕಿನ ಬೇವೂರು ಗ್ರಾಮದಲ್ಲಿ ದನಗಳ ದವಾಖಾನೆ ಕಟ್ಟಿಸಿರುವ ಬಗ್ಗೆ

೩೮ ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ (ಗುಳೇದಗುಡ್ಡ).—ಮಾನ್ಯ ಪಶು ಸಂಗೋಪನಾ ಪಶುವೈದ್ಯ ಸೇವೆಗಳು ಹಾಗೂ ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

(ಅ) ಬಾಗಲಕೋಟೆ ತಾಲೂಕಿನಲ್ಲಿ ಬೇವೂರ ಗ್ರಾಮದಲ್ಲಿ ೧೯೩೮ರಲ್ಲಿಯೇ ದನಗಳ ದವಾಖಾನೆ ಕಟ್ಟಿಸಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ?

(ಆ) ಅಲ್ಲಿ ವೈದ್ಯರು ಇಲ್ಲದಿರುವುದು ನಿಜವೆ?

(ಇ) ಹಾಗಿದ್ದಲ್ಲಿ ಅಲ್ಲಿಗೆ ವೈದ್ಯರನ್ನು ನಿಯಮಿಸುವ ಬಗ್ಗೆ ಸರ್ಕಾರದವರು ಕೈಗೊಳ್ಳುವ ಕ್ರಮವೇನು?

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ (ಪಶು ಸಂಗೋಪನಾ ಮತ್ತು ತೋಟಗಾರಿಕೆ ಮಂತ್ರಿಗಳು).—

(ಅ) ಇಲ್ಲ

(ಆ) ಉದ್ಭವಿಸುವುದಿಲ್ಲ

(ಇ) ಉದ್ಭವಿಸುವುದಿಲ್ಲ

ಕಿರಿಯ ಕಾಲೇಜುಗಳಲ್ಲಿ ಕೆಲಸ ಮಾಡುತ್ತಿರುವ ಉಪನ್ಯಾಸಕರ ಸಂಖ್ಯೆ

೬೯. ಶ್ರೀ ಬಿ. ಎಸ್. ಬಸವರಾಜ್ (ಅರಸಿಕೆರೆ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:—

(ಅ) ರಾಜ್ಯದಲ್ಲಿ ೫ ವರ್ಷಕ್ಕಿಂತ ಮೇಲ್ಪಟ್ಟ ಟಿನ್ಯೂರು ಬೇಸಿಸ್ ಆಧಾರದ ಮೇಲೆ ಸರ್ಕಾರಿ ಕಿರಿಯ ಕಾಲೇಜುಗಳಲ್ಲಿ ಕೆಲಸ ಮಾಡುತ್ತಿರುವ ಉಪನ್ಯಾಸಕರುಗಳ ಸಂಖ್ಯೆ ಎಷ್ಟು?

(ಆ) ಸದರಿ ಉಪನ್ಯಾಸಕರು, ಸ್ಥಳೀಯ ಆಧಾರದ ಮೇಲೆ ಉಪನ್ಯಾಸಕರಾಗಿ ಕೆಲಸ ಮಾಡುತ್ತಿದ್ದು ಸಂಬಳ ವಾರ್ಷಿಕ ಏರಿಕೆ ಮತ್ತು ಭತ್ಯೆ ಇತ್ಯಾದಿ ಎಲ್ಲಾ ಸೌಲಭ್ಯ ಕೊಟ್ಟಿದ್ದರೂ, ಇವರನ್ನು ಆದುಪರೆಗೂ ಖಾಯಂಗೊಳಿಸದಿರಲು ಕಾರಣವೇನು?

(ಇ) ಈ ಉಪನ್ಯಾಸಕರುಗಳನ್ನು ಖಾಯಂಗೊಳಿಸಲು ಸರ್ಕಾರದವರು ಕೈಗೊಂಡಿರುವ ಕಾರ್ಯಗಳೇನು?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು). —

(ಅ) ಹಾಲಿ ೯೦ ಮಂದಿ ಉಪನ್ಯಾಸಕರು ಕೆಲಸ ಮಾಡುತ್ತಿದ್ದಾರೆ.

(ಆ) ಈ ಉಪನ್ಯಾಸಕರು ನೇಮಕಗೊಂಡಾಗ ಇವರನ್ನು ಯಾವ ಜ್ಯೇಷ್ಠತಾ ಪಟ್ಟಿಯ ಪ್ರಕಾರವೂ ನೇಮಕ ಮಾಡಿಲ್ಲದ ಕಾರಣ ಇವರ ಸೇವೆಯನ್ನು ಖಾಯಂಗೊಳಿಸಲಾಗಲಿಲ್ಲ.

(ಇ) ಇದು ಸರ್ಕಾರದ ಪರಿಶೀಲನೆಯಲ್ಲಿದೆ.